"ದಿಢೀರ್ ಅಂತ್ಲೇ ಪ್ರೋಗ್ರ್ಯಾಮ್ ಫಿಕ್ಸ್ ಆಗಿದ್ದು. ನಿನ್ನ ಅಳಿಯಾನೂ ಜೊತೆಗೆ ಬರ್ತಾರೆ. ಬೆಳಗ್ಗೆ ಬರ್ತೀವಿ, ಸಂಜೆ ವಾಪಸು ಹೋಗ್ತೀವಿ..."

"..."

"ತಿಂಡಿ, ಊಟ ಅಂತ ತಲೆ ಕೆಡಿಸ್ಕೋಬೇಡ. ಯಾವಾಗ್ಲೂ ಬರೋ ಭಟ್ರಿಗೆ ನಾಳೇನೇ ಹೇಳಿಬ್ಬಿಡು. ಬೇಕಾದ ಸಾಮಾನು ಅವರೇ ತರ್ಲಿ. ನೀನು ಹಾಯಾಗಿ ನಮ್ಜೊತೆ ಇದ್ರೆ ಸಾಕು. ನಿಂದೇ ಅಧ್ಯಕ್ಷತೆ..."

"ಸಾಕು ಸುಮ್ನಿರೇ, ತಮಾಷಿ ಮಾಡ್ಬೇಡ..."

"ಬೈ ಅಮ್ಮಾ, ಭಾನುವಾರ ಸಿಗೋಣ. ಎಂಜಾಯ್ ಮಾಡೋಣ."

ಯಾವಾಗಲೂ ಹೀಗೇ ಇವಳು. ತಲೆಗೆ ಹೊಳೆದಿದ್ದು ನಡೆಸಿಯೇ ಸಿದ್ಧ. ಹೊಸ ಕವಿತೆಯೊಂದನ್ನು ಆವಾಹಿಸಿಕೊಳ್ಳುವ ತುರ್ತಿನಲ್ಲಿ ಹೆಚ್ಚಿನ ಕೆಲಸಗಳನ್ನೆಲ್ಲಾ ಬದಿಗೆ ತಳ್ಳಿ, ಪಟ್ಟಾಗಿ ಕೂತು ಬರೆಯಬೇಕೆನ್ನುವ ಹವಣಿಕೆಯಲ್ಲಿ ತಲೆ ಕೆಡಿಸಿಕೊಂಡಿದ್ದಳು ರೋಹಿಣಿ. ಅಥವಾ ಹಳೆಯದು ಯಾವುದಾದರೂ ಇದ್ದರೆ ತಿದ್ದಿ, ತೀಡಿ, ಪ್ರದರ್ಶನಕ್ಕೆ ಅಣಿಮಾಡಿದರೂ ಸಾಕು. ತನ್ನ ಮದುವೆಯಾದ ಹೊಸದರಲ್ಲಿ ಕಂಡ ಕನಸು ಮಗಳ ಮದುವೆಯ ನಂತರ ಸಾಕಾರಗೊಳ್ಳುವುದೆಂದು ಕನಸಲ್ಲಾದರೂ ಎಣಿಸಿದ್ದಿತ್ತೇ? ದೇವರಾಣೆಗೂ ಇಲ್ಲ...

ಮುಸುರೆಪಾತ್ರೆಗಳನ್ನು ಬೆಳಗಿ ಅಡುಗೆಮನೆಯ ಒಳಬಾಗಿಲಲ್ಲಿ ತಂದಿಡುತ್ತಿದ್ದ ನಾಗಿಗೆ ತಾಕೀತು ಮಾಡಿದಳು ರೋಹಿಣಿ,

"ನಾಳೆಯೋ, ನಾಡಿದ್ದೋ ಉಪ್ಪರಿಗೆ ಚೊಕ್ಕ ಮಾಡಿಡ್ಬೇಕು ಕಣೇ. ಬಲೆ ಇದ್ರೆ ಗುಡಿಸಿ, ಕಿಟಕಿ ಗಿಟಕಿ ಒರೆಸಿ, ಲಾಯ್ಸು ಮಾಡಿಡ್ಬೇಕು..."

"ನೆಂಟ್ರು ಬರ್ತಾರಾ ಅಮ್ಮ?" ಬಾಯಿ ಕಳೆದುಕೊಂಡು ಕೇಳಿದಳು ನಾಗಿ.

"ಹೂಂ ಕಣೇ, ಬರೋ ಭಾನುವಾರ..."

ಕೆಲಸ ಹೆಚ್ಚಾದರೂ ಅಡ್ಡಿಲ್ಲ, ನೆಂಟರು ಬರುತ್ತಾರೆಂದರೆ ನಾಗಿಗೆ ಭಾರೀ ಖುಷಿ. ಒಗೆದು ಮಡಿ ಮಾಡಿದ ಸೀರೆ ಉಟ್ಟು, ಎಣ್ಣೆ ಹಚ್ಚಿ ತಲೆ ಬಾಚಿ, ಹೂ ಮುಡಿದು ಶಿಸ್ತಾಗಿ ಬರುತ್ತಾಳೆ. ಅವಳ ಮುಖ ನೋಡುತ್ತಾ ರೋಹಿಣಿಯ ತುಟಿಗಳಲ್ಲಿ ಅರಳಿದ ನಗು ಅವಳ ಮುಗ್ಧ ಮಾತು ಕೇಳಿ ಮತ್ತಷ್ಟು ಬಿರಿಯಿತು. ಹೇಳುತ್ತಿದ್ದಳು ನಾಗಿ,

"ಈ ಕಾಗೆಗೆ ಮಂಡೆ ಸಮ ಇಲ್ಲ್ವಾ ಅಂತ? ಭಾನುವಾರ ಬರೋ ನೆಂಟ್ರನ್ನ ಇವತ್ತೇ ಯಾಕೆ ಕರೀತಿದೆ?"

## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.